1. ಸರಿಯಾದಂತಹ ವಿದ್ಯುತ್ ಪೂರೈಕೆ ಇಲ್ಲ
2. ದಡ್ಡಿ ಹತ್ತಿರ ಘಟಪ್ರಭಾ ನದಿಗೆ ಬ್ರಿಡ್ಜ್‌ಮ್ ಬಂಡಾರ ಕಟ್ಟುವುದು,
3. ಸಲಾಮವಾಡಿ ಯಾತ ನೀರಾವರಿ,
4. ದಡ್ಡಿ ನಾಗನೂರು ಯಾತ ನೀರಾವರಿ
5. ರೊಂಡಗಟ್ಟಿ ಬೆಳಂಕಿ ಮತ್ತು ಕೋಟ ಗ್ರಾಮಗಳಿಗೆ ನೀರಿನ ಯೋಜನೆಯ ಅನುಷ್ಠಾನ
6. ದೊಡ್ಡಿ ಮಂಡಲ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆಯಿಂದ ರಸ್ತೆ ನಿರ್ಮಾಣ
7. ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುವ ರಸ್ತೆಗಳ ಹಾಗೂ ಕುಡಿಯುವ ನೀರಿನ ಸಮಸ್ಯೆ ನಿವಾರಿಸುವಲ್ಲಿ ವಿಫಲತೆ
8. ದಡ್ಡಿ ಗ್ರಾಮದಲ್ಲಿ ಬಸ್ ನಿಲ್ದಾಣದ ನಿರ್ಮಾಣ
9. ಗುಡಗನ ಹಟ್ಟಿ ಹಾಗೂ ಇನ್ನುಳಿದ ಗ್ರಾಮಗಳಿಗೆ ವಿಶ್ವ ಆಹಾರ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಯೋಜನೆ ಪೂರ್ಣ ಮಾಡದೇ ಇರುವುದು.

ಈ ಎಲ್ಲಾ ವಿಷಯಗಳನ್ನು ಸಾರ್ವಜನಿಕ ಹಿತರದೃಷ್ಟಿಯಿಂದ ತ್ವರಿತವಾಗಿ ಪೂರ್ಣ ಮಾಡುವಂತೆ ಜನರ ಬೇಡಿಕೆ ಇದ್ದು ಹೆಚ್ಚಾಗಿ ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುವ ಕೆಲಸದಲ್ಲಿ ನಿರ್ಲಕ್ಷ್ಯತನದ ಹಿನ್ನೆಲೆಯಲ್ಲಿ ಈ ಬಂದನ್ನು ಆಚರಿಸುತ್ತಿದ್ದುದು ಕಂಡು ಬರುತ್ತದೆ ಇನ್ನುಳಿದ ಇಲಾಖೆಗಳಿಗೆ ಕೂಡಾ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಆದೇಶವನ್ನು ಕೊಟ್ಟು ಹಾಗೂ ಜಿಲ್ಲಾ ಪರಿಷತ್‌ನ ಮುಖ್ಯ ಕಾರ್ಯದರ್ಶಿ ಮತ್ತು ಬೆಳಗಾವಿಯ ಜಿಲ್ಲಾಧಿಕಾರಿಗಳು ಜಂಟಿಯಾಗಿ ಸ್ಥಳಕ್ಕೆ ಭೇಟಿ ಕೊಟ್ಟು ತೊಂದರೆಯನ್ನು ನಿವಾರಿಸುವಂತೆ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಸದನದಲ್ಲಿ ಹೇಳಿಕೆ ನೀಡಲು ಒತ್ತಾಯಿಸುತ್ತೇನೆ.

ಶ್ರೀ ಎಂ ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷಣೆಯವರೆ ಮಾನ್ಯ ಸದಸ್ಯರು ಎತ್ತಿದಂಥ ಪ್ರಶ್ನೆಯನ್ನು ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್‌ರಾಜ್ ಪಶುಸಂಗೋಪನೆ ಮತ್ತು ಹೈನುಗಾರಿಕಾ ಮಂತ್ರಿಗಳವರ ಗಮನಕ್ಕೆ ತರುತ್ತೇನೆ.

6) ಬಂಟ್ವಾಳ ಪುರಸಭೆ ವ್ಯಾಪ್ತಿಯ ಮಫತ್‌ಲಾಲ್ ಫೈವುಡ್ ಇಂಡಸ್ಟ್ರೀಸ್ ಜಮೀನಿನ ಮಾರಾಟ

ಶ್ರೀ ಬಿ. ರಾಮನಾಥ್ : ಬೆಂಗಳೂರು ನಗರ ಹಾಗೂ ಬಂಟ್ವಾಳ ಪುರಸಭೆ ವ್ಯಾಪ್ತಿಗೆ ಒಳಪಟ್ಟ ಮಫತ್‌ಲಾಲ್ ಫೈವುಡ್ ಇಂಡಸ್ಟ್ರೀಸ್ (ಲಿ) ನ್ನು ಕಳೆದ 16 ತಿಂಗಳಿಂದಲೂ ರೋಗಗ್ರಸ್ಥ ಕಾರ್ಖಾನೆ ಎಂದು ಪರಿಗಣಿಸಿ ಮುಚ್ಚಲ್ಪಟ್ಟಿದೆ. ಅಲ್ಲಿ ಕೆಲಸ ಮಾಡುತ್ತಿರುವ ಅನೇಕ ನೌಕರರು ಬೀದಿ ಪಾಲಾಗಿದ್ದಾರೆ. ಈ ರೋಗಗ್ರಸ್ಥ ಕಾರ್ಖಾನೆಯನ್ನು ಪುನರ್ಚೇತನಗೊಳಿಸಲು ಆರ್ಥಿಕ ವ್ಯವಸ್ಥೆಗೆ ಬಿ.ಐ.ಎಫ್.ಆರ್. ಇವರು ಕಾರ್ಖಾನೆಯ ವಶದಲ್ಲಿರುವ ಹೆಚ್ಚುವರಿ ಜಮೀನನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸಿಕೊಡುವಂತೆ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಸೂಚನೆ ಕೊಟ್ಟಿರುತ್ತಾರೆ. ಸರಕಾರವು ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ ನೌಕರರ ಹಿತದೃಷ್ಟಿಯಿಂದ ಕಾರ್ಖಾನೆಯ ಹೆಚ್ಚುವರಿ ಜಮೀನನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸಿ ಕೊಡುವುದೇ.

ಶ್ರೀ ಎಂ ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷಣೆಯವರೆ,

ಮಫತ್‌ಲಾಲ್ ಫ್ಯೆವುಡ್ ಇಂಡಸ್ಟ್ರೀಸ್ (ಲಿ) ಒಂದು ಖಾಸಗಿ ಕಂಪನಿ ಸದರಿ ಕಂಪನಿಯು ಸಿಕ್ ಇಂಡಸ್ಟ್ರೀಸ್ ಆಕ್ಟ್ 1985 ಇದರ ಸೆಕ್ಷನ್ 15 (1) ರ ಪ್ರಕಾರ ಬಿ.ಐ.ಎಫ್.ಆರ್. ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ ಸದರಿ ಕಂಪನಿಯು ರೋಗಗ್ರಸ್ತ ಸಂಸ್ಥೆಯೆಂದು ಘೋಷಿಸಬೇಕೆಂದು ಮತ್ತು ಇದರ ಪುನರ್‌ಸಜ್ಜಿಕರಣಕ್ಕೆ ಆದೇಶಿಸಬೇಕೆಂದು ಅರ್ಜಿ ಸಲ್ಲಿಸಿತ್ತು ಸದರಿ ಅರ್ಜಿಯನ್ನು ಪರಿಶೀಲಿಸಿದ ಬಿ.ಐ.ಎಫ್.ಆರ್. ಪ್ರಾಧಿಕಾರವು ದಿನಾಂಕ 13-2-1990 ರ ಆದೇಶದಲ್ಲಿ ಸದರಿ ಕಂಪನಿಯು ಒದಗಿಸಿರುವ ವಿವರ ಪರಿಶೀಲಿಸಲಾಗಿ ಇದರ ಪುನರಸಜ್ಜೀಕರಣ ಸಾಧ್ಯವಿಲ್ಲವೆಂದು ಇದನ್ನು ಮುಚ್ಚುವುದು ಅನಿವಾರ್ಯವೆಂಬ ತೀರ್ಮಾನಕ್ಕೆ ಬಂದಿತು ಅದಾಗ್ಯೂ ಸದರಿ ಕಂಪನಿಯ ಕೋರಿಕೆ ಮೇಲೆ ಪುನರ್‌ಸಜ್ಜೀಕರಣದ ಬಗ್ಗೆ ಹೊಸ ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಮತ್ತೆ ಕಾಲಾವಕಾಶವನ್ನು ನೀಡಿತು. ಈ ಆದೇವಮಾದ ನಂತರ ಕಂಪನಿಯು ಬಿ.ಐ.ಎಫ್.ಆರ್. ಮುಂದೆ ಹೊಸ ಪ್ರಸ್ತಾವನೆಯನ್ನು ಸಲ್ಲಿಸಿತು. ಇದನ್ನು ದಿನಾಂಕ 30-4-1990 ರಂದು ಪರಿಶೀಲಿಸಿದ ಬಿ.ಐ.ಎಫ್.ಆರ್. ಪ್ರಾಧಿಕಾರವು ಪುನಃ ಸದರಿ ಕಂಪನಿಯ ಪುನರ್‌ಸಜ್ಜಿಕರಣ ಸಾಧ್ಯವಿಲ್ಲವೆಂಬ ತೀರ್ಮಾನಕ್ಕೆ ಬಂದಿತು ಆದರೂ ಸದರಿ ಕಂಪನಿಯ ಕೋರಿಕೆ ಮೇಲೆ ಮತ್ತೆ ಕಾಲಾವಕಾಶ ನೀಡಿತು. ನಂತರ ಸದರಿ ಕಂಪನಿಯು ಬಿ.ಐ.ಎಫ್.ಆರ್. ಪ್ರಾಧೀಕಾರದ ಮುಂದೆ ಹೊಸ ಪುನರ್‌ಸಜ್ಜೀಕರಣದ ಯೋಜನೆ ಮಂಡಿಸಿದ ಬಗ್ಗೆ ಹಾಗೂ ಪುನರ್‌ಸಜ್ಜೀಕರಣಕ್ಕೆ ಸದರಿ ಪ್ರಾಧಿಕಾರ ಆದೇಶ ನೀಡಿದ ಬಗ್ಗೆ ವರದಿ ಬಂದಿರುವುದಿಲ್ಲ.

ಈ ಮಧ್ಯೆ ಸದರಿ ಕಂಪನಿಯು ಸರ್ಕಾರಕ್ಕೆ ಒಂದು ಅರ್ಜಿಯನ್ನು ಸಲ್ಲಿಸಿ (19-12-1990) ಕಂಪನಿಗೆ ಸೇರಿದ ಹೆಚ್ಚುವರಿ ಭೂಮಿಯನ್ನು ಮಾಡಿ ಬಂದ ಹಣವನ್ನು ಬ್ಯಾಂಕ್ ಸಾಲ ತೀರಿಸಲು ಹಾಗೂ ಪುನರ್‌ಸಜ್ಜೀಕರಮಗೊಳಿಸಲು ಉಪಯೋಗಿಸಿ ಕೊಳ್ಳಲಾಗುವುದೆಂದು ತಿಳಿಸಿ ಹೆಚ್ಚುವರಿ ಜಮೀನು ಮಾರಲು ಸರ್ಕಾರದ ಅನುಮತಿ ಕೋರಿದರು. ಸರ್ಕಾರದ ಆದೇಶ ಸಂಖ್ಯೆ ಸಿ.ಐ. 15 ಪಿಯುಎಂ 86, ದಿನಾಂಕ 17-10-88 ರಲ್ಲಿ ರೋಗಗ್ರಸ್ತ ಕಂಪನಿಯ ಹೆಚ್ಚುವರಿ ಜಮೀನು ಮಾರಿ ಬಂದ ಹಣವನ್ನು ಪುನರ್‌ಸಜ್ಜೀಕರಣದಲ್ಲಿ ಹೇಳಿರುವ ಉದ್ದೇಶಗಳಿಗೆ ಉಪಯೋಗಿಸಲು ಸರ್ಕಾರದ ಅನುಮತಿ ನೀಡುವ ಬಗ್ಗೆ ಅವಕಾಶವಿದೆ. ಸದರಿ ಆದೇಶದಲ್ಲಿ ತಿಳಿಸಿರುವಂತೆ ಹೀಗೆ ಮಾಡಲು ಬಿ.ಐ.ಎಫ್.ಆರ್. ಪ್ರಾಧಿಕಾರವು ಪುನರ್‌ಸಜ್ಜಿಕರಣಕ್ಕೆ ಆದೇಶಿಸಬೇಕು. ಆದರೆ ಬಿ.ಐ.ಎಫ್.ಆರ್. ಪ್ರಾಧೀಕಾರವು ಪುನರ್‌ಸಜ್ಜಿಕರಣಕ್ಕೆ ಆದೇಶ ನೀಡಿರುವುದಿಲ್ಲ. ಆದಾಗ್ಯೂ ನಿರ್ದೇಶಕರು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಇವರ ವತಿಯಿಂದಲೂ ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ವತಿಯಿಂದಲೂ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯವರ ಅಭೀಪ್ರಾಯ ತಿಳಿಸಲು ದಿನಾಂಕ 12-11-1990 ರಂದು ಪತ್ರ ಬರೆಯಲಾಗಿದೆ. ಆದಷ್ಟು ಬೇಗ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು.

7) ರಾಜ್ಯದಲ್ಲಿನ ವಿದ್ಯುತ್ ಸರಬರಾಜು ಮತ್ತು ಅದರ ದುರುಪಯೋಗ.

ಶ್ರೀ ಜಿ.ಎಸ್. ಆಚಾರ್ (ಬೈಂದೂರ್) : ಮಾನ್ಯ ಉಪಾಧ್ಯಕ್ಷೀಣಿಯವರೆ, ವಿದ್ಯುತ್ತನ್ನು ಸಮರ್ಪಕವಾಗಿ ಪೂರೈಸಲಾಗದೆ, ಬಳಕೆದಾರರಿಗೆ ಆಗಾಗ ಅಲಭ್ಯವಾಗುತ್ತಿರುವುದು, ಇದರಿಂದಾಗಿ ತನ್ನಿಂದ ತಾನೇ ರೆವಿನ್ಯೂ ಕಡಿತವಾಗುತ್ತಿರುವುದು, ಅಸಮರ್ಥ ಪಾರುಪತ್ಯದಿಂದಾಗಿ ನಿರ್ವಹಣೆ, ವಿತರಣೆಗಳಲ್ಲಿ ಲೋಪವಾಗಿರುವುದು, ಹಿಡಿತ ಮೆಚ್ಚ ಏರಿ ಭ್ರಷ್ಟಾಚಾರದ ಆರೋಪಕ್ಕೆ ಗುರಿಯಾಗಿರುವುದು, ಇದರಿಂದಾಗಿ ಕಳೆದ ಅನೇಕ ವರ್ಷಗಳಿಂದ ಸತತ ನಷ್ಟ ಅನುಭವಿಸುತ್ತಿರುವುದು ; ಕೆ.ಇ.ಬಿ.ಯ ದಾಖಲೆಯಾಗಿದೆ. ಇವನ್ನೆಲ್ಲ ಸರಿಪಡಿಸುವ ಬದಲು- ದರ ಏರಿಸುವುದು ಮಾತ್ರವಲ್ಲ, ದರ ಪಟಿಯನ್ನೇ ಬದಲಿಸಿ, ಹಿಂದಿನ ಅನೇಕ ವರ್ಷಗಳ ಬಾಕಿ ವಸೂಲಿಗಾಗಿ ಕ್ರಮಕೈಗೊಳ್ಳುತ್ತಿರುವುದು ಅನ್ಯಾಯವಾಗಿದೆ. 1985ರಿಂದ ಕೆಲವು ಬಳಕೆದಾರರಿಗೆ ಎಲ್‌ಟಿ-5 ಎಂಬ ತಪ್ಪಶೀಲಿನ